# ಕಾಲದ ಹಕ್ಕಿ ಮತ್ತು ಕನ್ನಡ

ಅಕ್ಷರ ಎನ್ನುವುದು ಮನುಕುಲದ ನಾಶವಾಗದ ಸಂಪತ್ತು. ಅಕ್ಷರವೆಂದರೆ ಮನುಷ್ಯರ ಮನದ ಭಾವನೆಗೆ, ಆಲೋಚನೆಗೆ ಒದಗಿದ ವಿನ್ಯಾಸ. ಸುಮಾರು ನಾಲ್ಕು ಸಾವಿರ ವರ್ಷಗಳಿಂದ ಮನುಷ್ಯರ ಜೊತೆಗಿರುವ ಅದು ಅವರಂತೆ ರೂಪುಗೊಳ್ಳುತ್ತ, ಅವರಂತೆ ಬದಲಾಗುತ್ತ ಬಂದಿದೆ. ಎಷ್ಟೋ ನಾಗರಿಕತೆಗಳಲ್ಲಿ ಅಕ್ಷರವೇ ಶೋಷಣೆಯ ಅಸ್ತ್ರ; ಆದರೆ ವಿಮೋಚನೆಗೂ ಅದೇ ಅಸ್ತ್ರ. ಅಂಥ ಅಕ್ಷರಕ್ಕೆ ಈಗ 'ಗೂಗಲ್' ಜೊತೆ ಗುದ್ದಾಟ. ಅಕ್ಷರಗಳಲ್ಲಿ ಒಡಮೂಡುತ್ತಿರುವ ಸಾಹಿತ್ಯಕ್ಕೂ ಡಿಜಿಟಲ್ ಪರದೆಯೇ ಇಂದಿನ ತಾಣ. ಯಾರು ಒಪ್ಪಲಿ, ಬಿಡಲಿ ಆರಂಭವಾಗಿದೆ ಸಾಹಿತ್ಯದ ಲೋಕಾಂತ ಪಯಣ.

ಸಾವಿರಾರು ವರ್ಷಗಳಿಂದ ನಾಲಗೆ, ಸುಟ್ಟ ಇಟ್ಟಿಗೆ, ಕಲ್ಲುಬಂಡೆ, ತಾಮ್ರ, ತಾಳೆಗರಿ, ಕಾಗದ ಎಲ್ಲದರ ಮೂಲಕ ಉಳಿದು – ಬೆಳೆದು ಬಂದ ಸಾಹಿತ್ಯಕ್ಕೆ ಈಗ 'ಡಿಜಿಟೀಕರಣ' ದ ಮೂಲಕ 'ಜಾಗತೀಕರಣ'ದ ದೀಕ್ಷೆ ದೊರೆತಿದೆ. ಹೊಸ ಸಹಸ್ರಮಾನ ಆರಂಭವಾದ ಮೇಲೆ, ಯಾವ ದೇಶವನ್ನಾದರೂ ಹೆಸರಿಸಿ, ಅಲ್ಲಿನ ದೇಶಭಾಷೆಯ ಸಾಹಿತ್ಯದ ಡಿಜಿಟೀಕರಣದ ವಿವಾದ, ವಾಗ್ವಾದ ನಡೆಯುತ್ತಿದೆ. ಹಾಗೆ ನೋಡಿದರೆ ಕಂಪ್ಯೂಟರ್ ಕೀಲಿಮಣೆಯಲ್ಲಿ ಒಂದು ಭಾಷೆಯ ಬರವಣಿಗೆ ಆದೊಡನೆ ಅದರ ಡಿಜಿಟೀಕರಣ ಆಗಿಬಿಟ್ಟಿತ್ತು; ಈಗ ಚರ್ಚೆಗೆ ಉಳಿದಿರುವ ವಿಚಾರಗಳೆಂದರೆ ಬರೆದವನ ಹಕ್ಕುಗಳ ಹರಣ ಮತ್ತು ಅವನಿಗೆ ಬರಬೇಕಾದ ಹಣ. ಜಗತ್ತಿನಾದ್ಯಂತ ಕಾಪಿರೈಟ್, ಕಾಪಿಲೆಫ್ಟ್ ಮುಂತಾದ್ದರ ಬಗ್ಗೆ ಕಂಪೆನಿಗಳು ಕೋರ್ಟುಗಳಲ್ಲಿ ಕಿತ್ತಾಡುತ್ತಿವೆ. ಏಕೆಂದರೆ ಅದರಲ್ಲಿ ಕೋಟಿಗಟ್ಟಲೆ ಹಣವಿದೆ.



ಕನ್ನಡದಲ್ಲಿ ಬರೆಯುವ, ಓದುವ ನಾವೇನು ಮಾಡಬೇಕು? ಮೊದಲು 'ಗೋಡೆಯ ಮೇಲಿನ ಬರಹ'ವನ್ನು ಓದಬೇಕು. ಎಲ್ಲ ಭಾಷೆಗಳ ಸಾಹಿತ್ಯವೂ ಅಂತರ್ಜಾಲದಲ್ಲಿ ಇರುವಾಗ ಕನ್ನಡ ಸಾಹಿತ್ಯವೂ ಅದರಲ್ಲಿ ಅಂತರ್ಗತವಾಗಬೇಕು. ವಿಶ್ವದ ಮೂಲೆ ಮೂಲೆಗಳಲ್ಲಿರುವ ಕನ್ನಡಿಗರು ಹೊಸ ತಂತ್ರಜ್ಞಾನದ ಮೂಲಕ ಹೊಸ ಕನ್ನಡ ಪುಸ್ತಕಗಳನ್ನು ಕೂಡಲೇ ಓದುವಂತಾಗಬೇಕು. ಕನ್ನಡ ಸಾಹಿತ್ಯದ ಡಿಜಿಟೀಕರಣ ಈಗಾಗಲೇ ಆರಂಭವಾಗಿದೆ– ಆದರೆ ಆಗಬೇಕಾದ್ದು ಬಹಳವಿದೆ. ಈ ಸೌಲಭ್ಯ ಒದಗಿಸಲು ಕೆಲವು ಸಂಸ್ಥೆಗಳೂ ಸಿದ್ಧವಾಗಿವೆ. ಆದರೆ ಹಕ್ಕು, ಹಣ ಎರಡರ ಬಗ್ಗೆಯೂ ಎಚ್ಚರವಹಿಸಿ ನಮ್ಮ ಕನ್ನಡ ಲೇಖಕರು ಹೆಜ್ಜೆ ಇಡಬೇಕು. ಕಾಲದ ಹಕ್ಕಿಯೊಂದಿಗೆ ಕನ್ನಡವೂ ಹಾರಬೇಕಲ್ಲವೇ?

–ಆರ್. ಪೂರ್ಣಿಮಾ